

# ಆಕರ್ಷಕ ಮೋರೊ ರಾಕ್!

ದೂರದಿಂದ ನೋಡಲು ದೊಡ್ಡ ಕಲ್ಲಿನ ಬೆಟ್ಟದಂತೆ ಕಾಣುವ ಜ್ವಾಲಾಮುಖಿಯ ಅವಶೇಷ, ಅಮೆರಿಕ ದೇಶದ ಕ್ಯಾಲಿಫೋರ್ನಿಯಾ ರಾಜ್ಯದ ಮೋರೋ ಕೊಲ್ಲಿಯ ಮಧ್ಯದಲ್ಲಿ ಅಚಲವಾಗಿ ನಿಂತಿರುವ ಮೋರೋ ರಾಕ್ ಪ್ರಕೃತಿಯ ವಿಸ್ಮಯವೆನಿಸುತ್ತದೆ.. 576 ಅಡಿ ಎತ್ತರದ ಈ ಶಿಲೆಯನ್ನು 1968ರಿಂದಲೇ ವಿಶ್ವ ಪರಂಪರೆಯ ತಾಣವೆಂದು ಗುರುತಿಸಲಾಗಿದೆ.

ಈ ಮೋರೋ ಶಿಲೆಯ ಸಮುದ್ರ ತೀರ ಕ್ಯಾಲಿಫೋರ್ನಿಯಾ ರಾಜ್ಯದ ಐತಿಹಾಸಿಕ ಹೆಗ್ಗುರುತಾಗಿದೆ. ದೀರ್ಘಾವಧಿಯಲ್ಲಿ ನಾಶವಾದ ಜ್ವಾಲಾಮುಖಿಯ ಅವಶೇಷವೆನಿಸಿ ಕೊಂಡ ಈ ಮೋರೋ ಶಿಲೆ 23 ದಶಲಕ್ಷ ವರ್ಷಗಳ ಹಿಂದಿನದು. ಈ ಬೃಹತ್ ಶಿಲೆ 300ನೌಕಾ ಪಡೆಗಳಿಗೆ ದಾರಿ ದೀಪದಂತಿದೆ. ಉಆನ್ ಡ್ರಿಕೆಜ್ ಕ್ಯಾಬ್ರಿಯೊ ಹೆಸರಿನ ಪೋರ್ಚುಗಲ್ ಅನ್ವೇಷಕ 1542ರಲ್ಲಿ ಎಲ್ ಮೋರೋ ಎನ್ನುವ ಹೆಸರನ್ನು ನೀಡಿದನಂತೆ. ಅದರ ಅರ್ಥ ಕಿರೀಟಾಕಾರದ ಬೆಟ್ಟ ಎಂದು. ಇದು ಗಾತ್ರದಲ್ಲಿ ಎಷ್ಟು ದೊಡ್ಡದಾಗಿದೆ ಎಂದರೆ  ಬಹಳಷ್ಟು ಮೈಲುಗಳ ದೂರದಿಂದಲೂ  ನೋಡುಗರ ಕಣ್ಣು ಸೆಳೆಯುತ್ತದೆ .



ದೂರದ ರೆಸ್ಟೋರೆಂಟುಗಳಲ್ಲಿ ಕುಳಿತು ಮೋರೋ ಬೃಹತ್ ಶಿಲೆಯನ್ನು ನೋಡುತ್ತಾ ಉಪಹಾರ ಸೇವಿಸಬಹುದು.  ಸಂಜೆ ಸೂರ್ಯಾಸ್ತಮಾನದ ಸಮಯದಲ್ಲಿ  ನೌಕಾಯಾನ ವಿಹಾರ ಮಾಡಿ ಆನಂದಿಸಬಹುದು. ಇಲ್ಲವಾದಲ್ಲಿ ನಿಮ್ಮ ವಾಹನದಲ್ಲೇ ಹತ್ತಿರ ಹೋಗಿ ಸುಂದರ ನೋಟವನ್ನು ಸವಿಯಬಹುದು.

1963ರ ತನಕ  ಈ ಮೋರೋ ಕಲ್ಲಿನಲ್ಲಿ ಗಣಿಗಾರಿಕೆ ನಡೆಯುತ್ತಿತ್ತು. ಮೋರೋ ಬಂದರು ಮತ್ತು ಕೊಲ್ಲಿಯ ನೀರಿನ ತಡೆಗಾಗಿ ಅಗತ್ಯವಾದ ವಸ್ತುಗಳನ್ನು ಪಡೆಯಲಾಗುತ್ತಿತ್ತು. ಆದರೆ 1968ರಲ್ಲಿ ಈ ಬೃಹತ್ ಶಿಲೆಯನ್ನು ಐತಿಹಾಸಿಕ ಹೆಗ್ಗುರುತಾಗಿ ಘೋಷಿಸಲ್ಪಟ್ಟ  ನಂತರ ಇದನ್ನು ಪಕ್ಷಿಧಾಮವಾಗಿ ಗುರುತಿಸಲಾಯಿತು ಮತ್ತು ಸಾಕಷ್ಟು ಜನ ಪ್ರಿಯವಾಯಿತು. ಭರ್ಜರಿಯಾದ  ಗುಮ್ಮಟಾಕಾರದ ಈ ಶಿಲೆ  ಚಾರಣ ಪ್ರಿಯರಿಗೆ ಆಕರ್ಷಕ ತಾಣವಾಗಿದೆ. ಅಮೆರಿಕದ ಸ್ಥಳೀಯ ಬುಡ ಕಟ್ಟು ಜನಾಂಗದವರಿಗೆ ಪವಿತ್ರ ಸ್ಥಳವೆನಿಸಿಕೊಂಡಿದೆ. ಕೊಲ್ಲಿಯ ದಡದಲ್ಲಿ ಕುಳಿತು ಸೂರ್ಯೋದಯ ಮತ್ತು ಸೂರ್ಯಾಸ್ತಮಾನವನ್ನು ನೋಡಲು ಕಣ್ಣುಗಳಿಗೆ ಹಬ್ಬವೆನಿಸುತ್ತದೆ. ಅಲೆಗಳ ಭೋರ್ಗರೆತವನ್ನು ಸವಿಯ ಬಹುದು. ಈ ಬೃಹತ್ ಶಿಲೆಯನ್ನು ನೋಡಲು ಸಾಕಷ್ಟು ಪ್ರವಾಸಿಗರ ಜಾತ್ರೆಯೇ ಅಲ್ಲಿರುತ್ತದೆ.

■ ಮಂಜುಳಾ ರಾಜ್